

# ಗಾರ್ಡೇನಿಯಾ ಹೂವಿನ ಕಂಪು



ಚಿತ್ರ– ಬರಹ:
ಡಾ. ಸ್ನೇಹಾಲಿ ಗಾಂವ್ಕರ್

ಪರಿಮಳ ಸೂಸುವ ಈ ಗಿಡದ ಹೂವು ಶ್ವೇತ ವರ್ಣದಿಂದ ಕೂಡಿದ್ದು ನೋಡಲು ಬಲು ಚಂದ. ಆಫ್ರಿಕಾ, ದಕ್ಷಿಣ ಏಷ್ಯಾ ಮೂಲದ ಈ ಸಸ್ಯವು ಭಾರತದಲ್ಲೂ ತನ್ನ ಕಂಪನ್ನು ಹರಡಿದೆ.

ಗಾರ್ಡೇನಿಯಾ ಎಂದು ಇಂಗ್ಲಿಷ್ ಹೆಸರಿನಿಂದ ಕರೆಯಲ್ಪಡುವ ಈ ಸಸ್ಯ ಲ್ಯಾಟಿನ್ ಭಾಷೆಯಲ್ಲಿ ಎರಡು ವಿಧದಿಂದ ಗುರುತಿಸಲ್ಪಡುತ್ತದೆ. 'ಗಾರ್ಡೇನಿಯಾ ಜಾಸ್ಮಿನೊಯ್ಡ್' ಮತ್ತು 'ಗಾರ್ಡೇನಿಯಾ ಅಂಗುಷ್ಠಾ' ಎನ್ನುವುದು ಆ ಪ್ರಭೇದಗಳು.

ಅನ್ನಾ ಮೇ ಕಿನ್ನಿ (**Anna May Kinney**) ಎಂಬ ಪರಿಸರವಾದಿ ಮಹಿಳೆ ಸಾವಯವ ಕ್ರಮದಿಂದ ಇದರ ಹೂದೋಟವನ್ನು ಬೆಳೆಸಿದವರು. ಇವರ ಹೂದೋಟದ 'ಗಾರ್ಡೇನಿಯಾ' ಗಿಡವನ್ನು ಇವರು ಪ್ರೀತಿಯ ಸಂಕೇತವಾಗಿ ಉಚಿತವಾಗಿ ನೀಡುತ್ತಿದ್ದರಂತೆ.

ಈ ಗಿಡವನ್ನು 1754 ರಲ್ಲಿ ಹಚ್ಚಿಸನ್ ಎಂಬ ಆಂಗ್ಲ ಹಡಗಿನ ಕ್ಯಾಪ್ಟನ್, ಪತ್ತೆ ಹಚ್ಚಿದ ಎಂದು ಬಲ್ಲ ಮೂಲಗಳು ತಿಳಿಸುತ್ತವೆ. ಈ ಹೂವಿಗೆ ಆಕರ್ಷಿತನಾದ ಆತ ಇಂಗ್ಲೆಂಡಿಗೆ ಹೋಗುವಾಗ ತನ್ನ ಜೊತೆ ಕೊಂಡೊಯ್ದನಂತೆ.

ಗಾರ್ಡೇನಿಯಾ ಹೂವನ್ನು ಗಾರ್ಡನ್‌ನಲ್ಲಿ ನೆಟ್ಟು ಬೆಳೆಸಿದರೆ ಮನೆಯಂಗಳವನ್ನೂ, ಸುತ್ತಮುತ್ತಲ ಜಾಗವನ್ನೂ ಸುಗಂಧಮಯವಾಗಿಸಬಹುದು.